# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## **S.C. No.** 296/2022

**ಸಾಕ್ಷಿಯನ್ನು ದಿನಾಂಕ 16.3.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪ್ರತಾಪ್ ಸಿ ಎಸ್ | ಪಿ.ಡಬ್ಲ್ಯೂ– 1 |
| ತಂದೆಯ/ಗಂಡನ ಹೆಸರು | : | ಶಿವಮೂರ್ತಿ | ಸಿ.ಡಬ್ಲ್ಯೂ– 1 |
| ವಯಸ್ಸು | : | 40 | |
| ಉದ್ಯೋಗ | : | ಮ್ಯಾನೇಜರ್, ಹೌಸಿಂಗ್ ಫೈನಾನ್ಸ | |
| ವಾಸ ಸ್ಥಳ | : | ನಂಜನಗೂಡು | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಚಾಸ 2 ರಿಂದ 6 ರವರ ಪರಿಚಯವಿದೆ. ದಿನಾಂಕ 6.4.2021 ರಂದು ನಾನು ಚಾಸ 2 ಮತ್ತು 3 ರವರ ಜೊತೆ ಸಿಂದುವಳ್ಳಿ ಗ್ರಾಮದ ಚಾಸ 4 ರವರ ಮನೆಗೆ ಹೋಗಿದ್ದೆವು. ಆ ಕಾಲಕ್ಕೆ ಚಾಸ 4 ರವರ ಮನೆಯಲ್ಲಿ ಹಬ್ಬ ಇದುದ್ದರಿಂದ ನಾವು ಅಲ್ಲಿಗೆ ಹೋಗಿದ್ದೆವು. ಆ ಕಾಲಕ್ಕೆ ಚಾಸ 4 ರವರ ತೋಟದ ಮನೆಯಲ್ಲಿ ಊಟಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆ ಕಾಲಕ್ಕೆ ನಾನು ಚಾಸ 2 ರಿಂದ 4 ರವರ ಜೊತೆ ಊಟ ಮಾಡುತ್ತಿದ್ದಾಗ ಪಕ್ಕದ ಜಮೀನಿನಲ್ಲಿ ಸಹ ಬೇರೆ ಜನರು ಊಟ ಮಾಡುತ್ತಿದ್ದರು. ಆ ಕಾಲಕ್ಕೆ ಚಾಸ 5 ರವರು ಚಾಸ 4 ರವರ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಆ ಕಾಲಕ್ಕೆ ಚಾಸ 5 ರವರು ಪಕ್ಕದ ತೋಟದಲ್ಲಿ ಬಿದ್ದ ತೆಂಗಿನ ಕಾಯಿಯನ್ನು ಎತ್ತಿಕೊಳ್ಳಲು

ಹೋದಾಗ ಅಲ್ಲಿ ಸೇರಿದ್ದ ಬಹಳಷ್ಟು ಜನ ಚಾಸ 5 ರವರ ಜೊತೆ ಗಲಾಟೆ ಮಾಡಿದರು. ಆ ಕಾಲಕ್ಕೆ ಚಾಸ 4 ಮಧುಕಿರಣ್ ಅವನು ನಮ್ಮ ಹುಡುಗ ಎಂದು ಅಲ್ಲಿಗೆ ಹೋದರು. ಆ ಕಾಲಕ್ಕೆ ಅಲ್ಲಿ ಸೇರಿದ್ದ ಜನರು ಚಾಸ 4 ರವರಿಗೆ ದೊಣ್ಣೆಯಿಂದ ಹೊಡೆಯುತ್ತಿದ್ದರು. ಅವರಿಗೆ ಹೊಡೆಯುವುದನ್ನು ನೋಡಿ ನಾನು ಅಲ್ಲಿಗೆ ಹೋದೆ, ನಂತರ ಚಾಸ 2 ಸಹ ಅಲ್ಲಿಗೆ ಬಂದನು. ಆ ಕಾಲಕ್ಕೆ ನನ್ನ ಹೊಟ್ಟೆಯ ಎಡಭಾಗಕ್ಕೆ ಯಾರೋ ಚಾಕುವಿನಿಂದ ಚುಚ್ಚಿದರು. ಚಾಸ 2 ಜಯಂತ್ ಗೂ ಸಹ ಹೊಟ್ಟೆಯ ಎಡಭಾಗಕ್ಕೆ ಚಾಕುವಿನಿಂದ ಚುಚ್ಚಿದರು. ಚಾಸ 3 ರವರು ನಮ್ಮನ್ನು ಬಿಡಿಸಲು ಬಂದಾಗ ಅವರಿಗೆ ರಾಡಿನಿಂದ ಹೊಡೆದರು. ಆ ಕಾಲಕ್ಕೆ ನಮಗೆ ಯಾರು ಹೊಡೆದರು ಎಂದು ಗೊತ್ತಿಲ್ಲ. ನನಗೆ ಮತ್ತು ಚಾಸ 2 ಹೆಚ್ಚಿನ ಗಾಯವಾಗಿದ್ದರಿಂದ ನಮ್ಮನ್ನು ಚಾಸ 3 ಮತ್ತು 6 ರವರು ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು. ನಂತರ ಅಲ್ಲಿಂದ ಕೆ.ಆರ್.ಆಸ್ಪತ್ರೆಗೆ ಕಳುಹಿಸಿದರು. ನಂತರ ನಾನು ವಿಜಯನಗರದ ಐಶ್ವರ್ಯ ಆಸ್ಪತ್ರೆಗೆ ಹೋಗಿದ್ದೆ ಮತ್ತು ಚಾಸ 2 ನಾರಾಯಣ ಹೃದಯಾಲಯ ಆಸ್ಪತ್ರೆಗೆ ಹೋಗಿದ್ದರು. ನಂತರ ದಿನಾಂಕ 8.4.2021 ರಂದು ನನ್ನನ್ನು ಅಸ್ಪತ್ರೆಯಿಂದ ಡಿಸ್‌ಚಾರ್ಜ ಮಾಡಿದ ಬಳಿಕ ನಾನೇ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ದೂರು ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿ1 ಎಂದು, ಸಹಿಯನ್ನು ನಿಪಿ1 ಎ ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಚಾಕುವನ್ನು ಮಹಜರ್ ಕಾಲಕ್ಕೆ ಅಮಾನತ್ತುಪಡಿಸಿಕೊಂಡು ಅದನ್ನು ಘಟನೆ ಕಾಲದಲ್ಲಿ ಉಪಯೋಗಿಸಿದ್ದಾರೆಂದು ಪೋಲಿಸರು ಹೇಳಿದರು. (ಈ ವೇಳೆಗೆ ಸದರಿ ಚಾಕನ್ನು ಸೀಲ್ ಮಾಡಿದ ಕವರಿನಿಂದ ತೆಗೆದು ಸಾಕ್ಷಿದಾರರಿಗೆ ತೋರಿಸಲಾಯಿತು) ಸದರಿ ಚಾಕುವನ್ನು ಎಂಒ 1 ಎಂದು ಗುರುತಿಸಿದೆ. ನನಗೆ ಚುಚ್ಚಿದ ಚಾಕುವಿನಿಂದಲೇ ಜಯಂತ್ ಗೆ ಸಹ ಚುಚ್ಚಿದ್ದರು. ಅರುಣೇಶ್ ಇವರಿಗೆ ಹೊಡೆಯಲು ಉಪಯೊೀಗಿಸಿದ ರಾಡನ್ನು ನೋಡಿದರೆ ಗುರುತಿಸುತ್ತೇನೆ. ಈಗ

ನಾನು ನೋಡುತ್ತಿರುವ ಮೂರು ಕಬ್ಬಿಣದ ರಾಡುಗಳನ್ನು ಮಹಜರ್ ಕಾಲಕ್ಕೆ ನನಗೆ ತೋರಿಸಿದ್ದರು. ಸದರಿ ರಾಡುಗಳನ್ನು ಎಂಓ 2 ರಿಂದ 4 ಎಂದು ಗುರುತಿಸಿದೆ. (ಈ ವೇಳೆಗೆ ಸದರಿ ರಾಡುಗಳನ್ನು ಸೀಲ್ ಮಾಡಿದ ಕವರಿನಿಂದ ತೆಗೆದು ಸಾಕ್ಷಿದಾರರಿಗೆ ತೋರಿಸಲಾಯಿತು) ದೂರು ನೀಡಿದ ಮರುದಿನ ಪೋಲಿಸರು ಮಹಜರಿಗೆ ಸಿಂದುವಳ್ಳಿ ಗ್ರಾಮಕ್ಕೆ ಬಂದು ಮಹಜರ್ ಮಾಡಿದ್ದರು. ಆಗ ನೋಟಿಸ್ ಮತ್ತು ಮಹಜರಿಗೆ ನನ್ನ ಸಹಿ ಪಡೆದಿದ್ದಾರೆ. ಈಗ ನಾನು ನೋಡುತ್ತಿರುವ ನೋಟಿಸ್ ಮತ್ತು ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ನೋಟಿಸನ್ನು ನಿಪಿ2 ಎಂದು, ಸಹಿಯನ್ನು ನಿಪಿ2 ಎ ಎಂದು, ಮಹಜರನ್ನು ನಿಪಿ3 ಎಂದು, ಸಹಿಯನ್ನು ನಿಪಿ3 ಎ ಎಂದು ಗುರುತಿಸಿದೆ. ಮಹಜರನ್ನು ಘಟನಾ ಸ್ಥಳದಲ್ಲಿ ಮಾಡಿದ್ದರು. ಆಗ ನಾನೇ ಆ ಸ್ಥಳ ತೋರಿಸಿ ಮಾಹಿತಿ ನೀಡಿರುತ್ತೇನೆ. ಮಹಜರ್ ಕಾಲಕ್ಕೆ ಅಲ್ಲಿ ಬಿದ್ದಿದ್ದ ಚಾಕು ಮತ್ತು ರಾಡುಗಳನ್ನು ಪೋಲಿಸರು ಅಮಾನತ್ತುಪಡಿಸಿಕೊಂಡರು. ಈಗ ನಾನು ನೋಡುತ್ತಿರುವ ಶರ್ಟ ಘಟನೆ ಕಾಲಕ್ಕೆ ನಾನು ಧರಿಸಿದ್ದ ಶರ್ಟ ಇದ್ದು ಅದನ್ನು ಮಹಜರ್ ಕಾಲಕ್ಕೆ ನಾನು ಹಾಜರುಪಡಿಸಿರುತ್ತೇನೆ. ಈಗ ನಾನು ನೋಡುತ್ತಿರುವ ಶರ್ಟ ಅದೇ ಇರುತ್ತದೆ. ಸದರಿ ಶರ್ಟನ್ನು ಎಂಓ 5 ಎಂದು ಗುರುತಿಸಿದೆ. ಮಹಜರ್ ಕಾಲಕ್ಕೆ ಪೋಟೋಗಳನ್ನು ತೆಗೆದರು. ಈಗ ನಾನು ನೋಡುತ್ತಿರುವ ಪೋಟೋಗಳು ಮಹಜರ್ ಕಾಲಕ್ಕೆ ತೆಗೆದ ಪೋಟೋ ಇರುತ್ತವೆ. ಸದರಿ ಪೋಟೋಗಳನ್ನು ನಿಪಿ4 ರಿಂದ 8 ಎಂದು ಗುರುತಿಸಿದೆ. ನನ್ನನ್ನು ನಂಜನಗೂಡಿನ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ದೂರಿನಲ್ಲಿರುವಂತೆ ಹೇಳಿಕೆ ನೀಡಿರುತ್ತೇನೆ. ದೂರಿನಲ್ಲಿ ಪ್ರಕಾಶ, ಶಿವರಾಜು, ಮಹದೇವು ಮತ್ತು ಸೋಮ ನಮಗೆ ಹೊಡೆದಿದ್ದಾರೆ ಎಂದು ಹೇಳಿರುತ್ತೇನೆ ಹಾಗೂ ಅದೇ ರೀತಿ ನ್ಯಾಯಾಲಯದಲ್ಲಿ ಸಹ ಹೇಳಿಕೆ ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ಆ ಹೇಳಿಕೆ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ9 ಎಂದು, ಸಹಿಯನ್ನು ನಿಪಿ9 ಎ ಎಂದು

ಗುರುತಿಸಿದೆ. ನನಗೆ ಹೊಡೆದಿದ್ದ ವ್ಯಕ್ತಿಗಳು ಯಾರೆಂದು ನಾನು ನೋಡಿಲ್ಲ. ದೂರು ನೀಡಿದ ಬಳಿಕ ದಿನಾಂಕ 9.4.2021 ರಂದು ಮರು ಹೇಳಿಕೆ ನೀಡಿರುತ್ತೇನೆ. ಆಗಲೂ ಸಹ ದೂರಿನಲ್ಲಿ ಹೇಳಿರುವಂತೆ ಹೇಳಿದ್ದೇನೆ. ಆ ಕಾಲಕ್ಕೆ ಯಾರು ಯಾರು ಎಲ್ಲಿ ಹೊಡೆದರು ಎಂದು ಹೇಳಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿಲ್ಲ, ಅವರನ್ನು ಈ ಮೊದಲು ಎಲ್ಲಿಯೂ ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ, ಪರಿಶೀಲಿಸಿ ಸಕಾರಣಗಳಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಎಂ.ಬಿ.ಎ ಪದವಿ ಓದಿರುತ್ತೇನೆ. ನಿಪಿ1 ದೂರನ್ನು ಟೈಪ್ ಮಾಡಿಸಿದ್ದೇವೆ ಎಂದರೆ ನಿಜ. ದೂರನ್ನು ನಾನೇ ಹೇಳಿ ಟೈಪ್ ಮಾಡಿಸಿದ್ದೇನೆ. ಪ್ರಕಾಶ ನನಗೆ ಚಾಕುವಿನಿಂದ ಚುಚ್ಚಿದ ಎಂದು ಪೋಲಿಸರಿಗೆ ಹೇಳಿಕೆ ನೀಡಿಲ್ಲ ಹಾಗೂ ದೂರಿನಲ್ಲಿ ಹೇಳಿರುವುದಿಲ್ಲ. 1 ನೇ ಆರೋಪಿ ಪ್ರಕಾಶನೇ ನನಗೆ ಹಲ್ಲೆ ಮಾಡಿದ್ದಾನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದೂರಿನಲ್ಲೂ ಸಹ ಆ ಬಗ್ಗೆ ನಮೂದಿಸಿಲ್ಲ. 3 ನೇ ಆರೋಪಿ ಸೋಮು ಚಾಸ 2 ಜಯಂತನಿಗೆ ಕಬ್ಬಿಣದ ರಾಡಿನಿಂದ ತಲೆಯ ಭಾಗಕ್ಕೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಶಿವರಾಜು ಚಾಸ 3 ಅರುಣೇಶನಿಗೆ ರಾಡಿನಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಗೊತ್ತಿಲ್ಲ. 3 ಮತ್ತು 4 ನೇ ಆರೋಪಿತರು ರಾಡಿನಿಂದ ಚಾಸ 4 ರವರ ಮೈಕೈಗೆ ಹೊಡೆದಿರುತ್ತಾರೆ ಎಂದು ಹೇಳಿಕೆ ನೀಡಿಲ್ಲ. ದಿನಾಂಕ 9.4.2021 ರಂದು ನಾನು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನ್ಯಾಯಾಲಯದ ಮುಂದಿರುವ ಆರೋಪಿತರೇ

ನನಗೆ ಮತ್ತು ಚಾಸ 2 ರಿಂದ 4 ರವರಿಗೆ ಎಂಓ 1 ರಿಂದ 4 ಎಂದು ಗುರುತಿಸಿರುವ ಚಾಕು ಮತ್ತು ರಾಡನಿಂದ ಹಲ್ಲೆ ಮಾಡಿರುತ್ತಾರೆ ಎಂದು ನಾನು ಅವರನ್ನು ನೋಡಿಲ್ಲ. ಈ ಬಗ್ಗೆ "ಮದ್ಯಾಹ್ನ ಸುಮಾರು 2.30 ಗಂಟೆ ಸಮಯದಲ್ಲಿ ------------- ---------------------- ಮೈಕೈಗೆ ಸಣ್ಣಪುಟ್ಟ ನೋವು ಮಾಡಿದರು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ10 ಎಂದು ಗುರುತಿಸಿದೆ. ಆರೋಪಿತರು ಹಲ್ಲೆ ಮಾಡಿದ್ದಾರೆ ಎಂದು ಗೊತ್ತಿದ್ದರೂ ಸಹ ಈಗ ಅವರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು